ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಪ್ರಶ್ನೆ, ಉಪ ಪ್ರಶ್ನೆ ಸಾಕಷ್ಟು ಕೇಳಬಹುದು, ಅದಕ್ಕೆ ಅವಕಾಶ ಕೊಡಬಾರದು ಎಂದೂ ಏನೂ ಇಲ್ಲ. ತಮ್ಮ ಅನುಮತಿ ಪಡೆದು ಎರಡು ಮಾತುಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅನೇಕ ಲೀಸ್‌ಗಳನ್ನು ಏನು ಕೊಟ್ಟಿದ್ದಾರೆ, ಲೀಸ್ ಪೀರಿಯಡ್ ಮುಗಿದು ಹೋಗಿದೆ, ಅದು ಯಾವ ಪರ್ಪಸ್‌ಗೆ ಕೊಟ್ಟಿದ್ದಾರೆ, ಆ ಪರ್ಪಸ್‌ಗೆ ಬಳಕೆ ಮಾಡಿಕೊಂಡಿಲ್ಲ ಎನ್ನುವುದು ಒಂದು. ಕೆಲವು ಲೀಸ್ ಡೀಡ್ ಮಾಡತಕ್ಕಂತಹ ಕಾಲದಲ್ಲಿ ಕಾಲ ಕೂಡ ಮಿತಿ ಮಾಡಿಲ್ಲ.

30 ವರ್ಷ, 35 ವರ್ಷ ಅಥವಾ 10 ವರ್ಷ ಎಂದು ಕಾಲ ಮಿತಿ ಕೂಡ ನಿಗಧಿ ಪಡಿಸಿಲ್ಲ. ಕಾಲ ಮಿತಿ ಇಲ್ಲದೆ 10 ವರ್ಷ ಕೊಡುವುದೇ, ಈ ತರಹ ತೊಂದರೆಗಳು ಇವೆ. ಅದಕ್ಕೆ ನಾನು ಆಗಲೇ ಆಡಳಿತ ಅಧಿಕಾರಿಗಳಿಗೆ ಮತ್ತು ಕಾರ್ಪೊರೇಷನ್ ಕಮಿಷನರುಗಳಿಗೆ ಸೂಚನೆ ಕೊಟ್ಟಿದ್ದೇನೆ. ಇದರ ಒಂದೊಂದು ಪ್ರಕರಣಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪರಿಶೀಲನೆ ಮಾಡಬೇಕೆಂದು ಹೇಳಿದ್ದೇನೆ. ಇದರ ಜೊತೆ ಸರ್ಕಾರ ಈಗಾಗಲೇ ತನ್ನ ನಿರ್ಣಯ ತೆಗೆದುಕೊಳ್ಳುವ ಹಂತದಲ್ಲಿ ಇದೆ. ಒಂದು ಡಿಐಜಿಯ ನೇತೃತ್ವದಲ್ಲಿ ಒಂದು ಪೋಲೀಸ್ ಹಿರಿಯ ತನಿಖಾ ದಳವನ್ನು ನೇಮಕ ಮಾಡಿ, ಕಾರ್ಪೊರೇಷನ್ ಮತ್ತು ನಗರ ಪಾಲಿಕೆ ಆಸ್ತಿ ಯಾರು ಇವತ್ತು ಆಕ್ರಮಣ ಮಾಡಿಕೊಂಡಿದ್ದಾರೆ, ಅಂತಹವರ ಮೇಲೆ ಉಗ್ರವಾದ ಕ್ರಮ ತೆಗೆದುಕೊಳ್ಳುತ್ತೇವೆ. ಸಣ್ಣ ಸಣ್ಣ ಬಡವರಿಗೆ ಅಲ್ಲ ಬಡವರಿಗೆ ನಾವು ಖಾಯಂ ಮಾಡುವುದಕ್ಕಾಗುವುದಿಲ್ಲ.

ಕಿರುಗಾವಲಿಗೆ ಪೋಲಿಸ್ ಠಾಣೆ ಮಂಜೂರು

26 - ಶ್ರೀ ಕೆ.ಎನ್. ನಾಗೇಗೌಡ (ಕಿರುಗಾವಲು) : ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಈ ಆರ್ಥಿಕ ವರ್ಷದಲ್ಲಿ ಎಷ್ಟು ಹೊಸ ಪೋಲೀಸ್ ಠಾಣೆಗಳನ್ನು ಸ್ಥಾಪಿಸಲು ಯೋಜನೆ ರೂಪಿಸಲಾಗಿದೆ?

ಆ) ಒಂದು ಪೋಲೀಸ್ ಠಾಣೆ ಸ್ಥಾಪಿಸಲು ಇರಬೇಕಾದ ಮೂಲಭೂತ ಅಗತ್ಯತೆಗಳೇನು?

ಇ) ಕಿರುಗಾವಲು ಗ್ರಾಮಕ್ಕೆ ಅವಶ್ಯಕತೆ ಇದೆಯೇ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಈ ಆರ್ಥಿಕ ವರ್ಷದಲ್ಲಿ 20 ಹೊಸ ಪೋಲೀಸ್ ಠಾಣೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ.

ಆ) ರಾಷ್ಟ್ರೀಯ ಪೋಲೀಸ್ ಆಯೋಗವು ತನ್ನ ಶಿಫಾರಸ್ಸಿನಲ್ಲಿ ಈ ಕೆಳಕಂಡ ಸಂದರ್ಭಗಳಲ್ಲಿ ಹೊಸ ಪೋಲೀಸ್ ಠಾಣೆಗಳನ್ನು ಸ್ಥಾಪಿಸಬಹುದೆಂದು ತಿಳಿಸಿದೆ.

(1) ಒಂದು ಪೋಲೀಸ್ ಠಾಣಾ ವ್ಯಾಪ್ತಿಯಲ್ಲಿನ ಜನಸಂಖ್ಯೆ 60,000 ಇರಬೇಕು.

(2) ಒಂದು ಪೋಲೀಸ್ ಠಾಣಾ ವ್ಯಾಪ್ತಿಯು 150 ಚದರ ಕಿ.ಮೀ.ಗಳಿಗಿಂತ ಹೆಚ್ಚಿನ ವಿಸ್ತೀರ್ಣ ಹೊಂದಿದ್ದಲ್ಲಿ, ಅಲ್ಲಿ ಇನ್ನೊಂದು ಠಾಣೆ ಪ್ರಾರಂಭಿಸುವುದು.

(3) ಒಂದು ಪೋಲೀಸ್ ಠಾಣೆ ವ್ಯಾಪ್ತಿಯಲ್ಲಿ ವಾರ್ಷಿಕ 700 ಅಪರಾಧ ಪ್ರಕರಣಗಳು ವರದಿಯಾದಲ್ಲಿ, ಆ ಠಾಣೆಯನ್ನು ವಿಭಜಿಸಿ ಹೊಸ ಠಾಣೆ ಪ್ರಾರಂಭಿಸುವುದು.

ಇದಲ್ಲದೇ, ಆ ಪ್ರದೇಶದಲ್ಲಿನ ಕಾನೂನು ಸುವ್ಯವಸ್ಥೆ ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳಲಾಗುತ್ತದೆ.

ಇ) ಸದ್ಯಕ್ಕೆ ಅವಶ್ಯಕತೆ ಇಲ್ಲ

12.40 ಪಿ.ಎಂ.

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಈ ಆರ್ಥಿಕ ವರ್ಷದಲ್ಲಿ 20 ಪೋಲೀಸ್ ಠಾಣೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದ್ದಾರೆ. ಆದರೆ ನಮಗೆ ಬೇಕಾಗಿರತಕ್ಕಂಥ ಉತ್ತರವೇನೆಂದರೆ ನ್ಯಾಷನಲ್ ಪೋಲೀಸ್ ಕಮಿಷನ್ ಆಧಾರದ ಮೇಲೆ ರಾಜ್ಯದಲ್ಲಿ ಎಷ್ಟು ಪೊಲೀಸ್ ಠಾಣೆಗಳು ಬೇಕು. ಎರಡನೆಯದಾಗಿ ಈ ಪೊಲೀಸ್ ಠಾಣೆಗಳಿಗೆ ಸಾಕಷ್ಟು ಸಿಬ್ಬಂದಿ ವರ್ಗಗಳು ಇದೆಯೇ? ಇನ್ನು ಮೂರನೆಯದಾಗಿ ಒಂದೊಂದು ತಾಲ್ಲೂಕುಗಳಿಗೆ, ಉದಾಹರಣೆಗೆ ನಿಪ್ಪಾಣಿ ಒಂದೇ ಕ್ಷೇತ್ರಕ್ಕೆ ಮೂರು ಪೊಲೀಸ್ ಠಾಣೆ ಇದೆ. ಆದರೆ, ಒಂದೊಂದು ತಾಲ್ಲೂಕುಗಳಿಗೆ, ಉದಾಹರಣೆಗೆ ನಿಪ್ಪಾಣಿ: ಒಂದೇ ಕ್ಷೇತ್ರಕ್ಕೆ ಮೂರು ಪೊಲೀಸ್ ಠಾಣೆ ಇದೆ. ಆದರೆ, ಒಂದೊಂದು ಪೊಲೀಸ್ ಠಾಣೆಗೆ ಅಂತಹ 150 ಸ್ಕ್ವಯರ್ ಕಿಮೀ. ಇರಬೇಕು ಎಂದು ನಮ್ಮ ಕಮಿಷನ್ ರಿಪೋರ್ಟ್ ಪ್ರಕಾರ ಗೈಡ್‌ಲೈನ್ ಏನಿದೆ, ಅದನ್ನು ಮೀರಿ ಇರತಕ್ಕಂಥ ಪೊಲೀಸ್ ಠಾಣೆಗಳನ್ನು ಸಾಮಾನ್ಯ ಜನರ ರಕ್ಷಣೆಗೋಸ್ಕರ ಎಲ್ಲಿಗೆ ಬೇಕಾಗಿದೆ ಆ ಕಡೆ ವರ್ಗಾವಣೆ ಮಾಡುತ್ತೀರ ಎನ್ನುವುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಪ್ರಕಾಶ್ ಬಾಬಣ್ಣ ಹುಕ್ಕೇರಿ : ಮಾನ್ಯ ಅಧ್ಯಕ್ಷರೆ, ನಿಪ್ಪಾಣಿ ಕ್ಷೇತ್ರದಲ್ಲಿ ನಿಪ್ಪಾಣಿ ಟೌನ್ ಪೊಲೀಸ್ ಸ್ಟೇಷನ್, ರೂರಲ್ ಪೊಲೀಸ್ ಸ್ಟೇಷನ್ ಮತ್ತು ಬಸವೇಶ್ವರ ಪೊಲೀಸ್ ಸ್ಟೇಷನ್ ಎಂದು ಒಟ್ಟು ಮೂರು ಪೊಲೀಸ್ ಠಾಣೆಗಳು ಇವೆ. ಆದರೆ ನನ್ನ ಕ್ಷೇತ್ರವಾದ ಸದಲಗಾದಲ್ಲಿ ಒಟ್ಟು ಜನಸಂಖ್ಯೆ ಒಂದು ಲಕ್ಷ 40 ಸಾವಿರ ಇದ್ದರೂ ಸಹ ಒಂದೇ ಒಂದು ಪೋಲೀಸ್ ಠಾಣೆ ಇದೆ. ಅದೇ ಪ್ರಕಾರ ಚಿಕ್ಕೋಡಿ ಎಂಬ ಕ್ಷೇತ್ರದಲ್ಲಿ ಒಂದೇ ಒಂದು ಪೊಲೀಸ್‌ಠಾಣೆ ಇದೆ. ಆದೇ ಪ್ರಕಾರ ಚಿಕ್ಕೋಡಿ ಎಂಬ ಕ್ಷೇತ್ರದಲ್ಲಿ ಒಂದೇ ಒಂದು ಪೊಲೀಸ್ ಠಾಣೆ ಇದೆ. ಮಾನ್ಯ ನಾಗೇಗೌಡರು ಕೇಳಿದ ಹಾಗೆ ಎಲ್ಲೆಲ್ಲಿ ಪೊಲೀಸ್ ಠಾಣೆಗಳು ಅವಶ್ಯಕತೆ ಇದೆ, ಅಲ್ಲೆಲ್ಲ ಸಮಾನತೆಯಿಂದ ಮಾಡಿಕೊಡುತ್ತೀರ ಎಂದು ಕೇಳುತ್ತೇನೆ.

ಅಧ್ಯಕ್ಷರು : ಪೊಲೀಸ್ ಸ್ಟೇಷನ್ ಕಡಿಮೆ ಇದ್ದರೆ ನಿಮಗೆ ಗೌರವ ಹೆಚ್ಚು.

ಶ್ರೀ ಪಿ.ಜಿ.ಆರ್.ಸಿಂಧ್ಯ : ಮಾನ್ಯ ಸದಸ್ಯರಾದ ನಾಗೇಗೌಡರ ಮೊದಲನೆಯ ಪ್ರಶ್ನೆಗೆ ಉತ್ತರ ಹೇಳುವುದಾದರೆ ರಾಜ್ಯದಲ್ಲಿ ಪೊಲೀಸ್ ಆಯೋಗದ ವರದಿ ಪ್ರಕಾರವಾಗಿ 1,279 ಠಾಣೆಗಳು ಬೇಕಾಗುತ್ತವೆ. ಅದರಲ್ಲಿ ಈಗ ಹಾಲಿ 748 ಪೊಲೀಸ್ ಠಾಣೆಗಳು ಇವೆ. ಇನ್ನು 531 ಪೊಲೀಸ್ ಠಾಣೆಗಳನ್ನು ನಾವು ಮಾಡಬೇಕಾಗುತ್ತದೆ. ಈ ವರ್ಷ ನಾವು ನಮ್ಮ ಹಣಕಾಸಿನ ಮಂತ್ರಿಗಳ ಸಹಕಾರದಿಂದ 20 ಪೊಲೀಸ್ ಠಾಣೆಗಳನ್ನು ಸ್ಥಾಪಿಸಬೇಕೆಂದು ಇದ್ದೇವೆ.

ನಾವು ರಾಷ್ಟ್ರೀಯ ಪೊಲೀಸ್ ಆಯೋಗದ ಶಿಫಾರಸ್ಸಿನ ಪ್ರಕಾರ ಮಾಡಬೇಕು ಎಂದರೆ ಬಹಳಷ್ಟು ವರ್ಷಗಳೇ ಬೇಕಾಗುತ್ತದೆ. ಆದುದರಿಂದ ಇನ್ನು ಹೆಚ್ಚಿಗೆ ಪೊಲೀಸ್ ಠಾಣೆಗಳನ್ನು ಮಾಡವುದಕ್ಕೆ ನಾನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಮಂತ್ರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿ, ಈ ವರ್ಷವೇ ಇನ್ನು ಹೆಚ್ಚಿನ ಪೊಲೀಸ್ ಠಾಣೆಗಳನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಇನ್ನು ಸಿಬ್ಬಂದಿ ವರ್ಗಗಳ ಬಗ್ಗೆ ಹೇಳುವುದಾದರೆ ಈಗ ಮಾನ್ಯ ಮುಖ್ಯಮಂತ್ರಿಗಳು ಕಳೆದ ಸಚಿವ ಸಂಪುಟದ ಸಭೆಯಲ್ಲಿ ಪೊಲೀಸ್ ಇಲಾಖೆಯಲ್ಲಿ ಇರತಕ್ಕಂಥ ಎಲ್ಲಾ ಖಾಲಿ ಹುದ್ದೆಗಳನ್ನು ಎಂದರೆ ಸಬ್‌ಇನ್ಸ್‌ಪೆಕ್ಟರ್‌ನಿಂದ ಹಿಡಿದು ಕಾನ್ಸ್‌ಟೇಬಲ್‌ವರೆಗೂ ಹಾಗೂ ಮಹಿಳಾ ಸಬ್‌ಇನ್ಸ್‌ಪೆಕ್ಟರ್‌ನಿಂದ ಹಿಡಿದು ಕಾನ್ಸ್‌ಟೇಬಲ್‌ವರೆಗೂ ಸಹ ನೇಮಕ

ಮಾಡಿಕೊಳ್ಳುವುದಕ್ಕೆ ಆದೇಶ ಕೊಟ್ಟಿದ್ದಾರೆ. ಅದರ ಪ್ರಕಾರ ಸುಮಾರು 4 ಸಾವಿರದಿಂದ 5 ಸಾವಿರದವರೆಗೆ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುತ್ತಿದ್ದೇವೆ. ಇನ್ನು ನಿಪ್ಪಾಣಿಯಲ್ಲಿ ಇರತಕ್ಕಂಥ 4-5 ಪೊಲೀಸ್ ಠಾಣೆಗಳ ಬಗ್ಗೆ ಗೌರವಾನ್ವಿತ ಸದಸ್ಯರಾದಂತಹ ಪ್ರಕಾಶ ಹುಕ್ಕೇರಿಯವರು ಪ್ರಸ್ತಾಪ ಮಾಡಿದ್ದಾರೆ. ನಿಪ್ಪಾಣಿ ಬಾರ್ಡರ್ ಏರಿಯಾದಲ್ಲಿ ಬರತಕ್ಕಂಥ ಒಂದು ತಾಲ್ಲೂಕು ಎನ್ನುವುದು ತಮಗೆ ಗೊತ್ತಿದೆ. ಅನೇಕ ಸಂದರ್ಭದಲ್ಲಿ ಈ ಬಾರ್ಡರ್‌ಅಥವಾ ಸೆನ್ಸಿಟೀವ್ ಏರಿಯಾ ಏನು ಇರುತ್ತದೆ ಅಲ್ಲಿ ದುರ್ಬಲ ವರ್ಗದವವ ಮೇಲೆ, ಹರಿಜನ ಗಿರಿಜನರ ಮೇಲೆ, ಎಲ್ಲಿ ಅತ್ಯಾಚಾರಗಳು ಜಾಸ್ತಿ ನಡೆಯುತ್ತವೆ ಅಂತಹ ಕಡೆಗಳಲ್ಲಿ ನಾವು ಹೆಚ್ಚಿಗೆ ಪೊಲೀಸ್ ಠಾಣೆಗಳನ್ನು ಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ ಪೊಲೀಸ್ ಇಲಾಖೆಯವರು ಹಲವಾರು ವರ್ಷಗಳಿಂದ, ಇಲಾಖೆಯ ಮುಖ್ಯಸ್ಥರು, ಇಲಾಖೆಯ ಅಧಿಕಾರಿಗಳ ಶಿಫಾರಸ್ಸಿನ ಮೇಲೆ ಮಾಡಿರತಕ್ಕಂಥ ಕ್ರಮವದು. ಆದುದರಿಂದ ಇಲ್ಲಿ ತಾರತಮ್ಯವಾಗಿದೆ ಎನ್ನುವುದನ್ನು ನಾನು ಒಪ್ಪುವುದಕ್ಕೆ ಸಿದ್ಧನಿಲ್ಲ. ಅವಶ್ಯಕತೆ ಬಿದ್ದ ಕಡೆ ಅದನ್ನು ಪುನರ್ ಪ್ರಾರಂಭ ಮಾಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ. ಮತ್ತು ಮಾನ್ಯ ನಾಗೇಗೌಡರು, ಅವರಿಗೆ ಬಹಳ ಮುಖ್ಯವಾಗಿ ಕಿರುಗಾವಲಿನಲ್ಲಿ ಒಂದು ಪೊಲೀಸ್ ಠಾಣೆ ಬೇಕು ಎಂದು ಹೇಳಿದ್ದಾರೆ. ಈ ಸಾಲಿನಲ್ಲೇ ಅವರಿಗೆ ಕೊಡುವುದಕ್ಕೆ ಪ್ರಯತ್ನವನ್ನು ಮಾಡುತ್ತೇನೆಂದು ನಾನು ಭರವಸೆ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ನಾಗೇಗೌಡರು ಐದು ಕೋಟಿ ಜನರ ರಕ್ಷಣೆಗೋಸ್ಕರ ಈ ಪ್ರಶ್ನೆಯನ್ನು ಕೇಳಿದ್ದಾರೆ ಎಂದು ನಾನು ತಿಳಿದಿದ್ದೆ. ಆದರೆ ಕೊನೆಗೆ ಅವರು ಕಿರುಗಾವಲಿಗೆ ಬಂದರು. ಅದರ ಬಗ್ಗೆ ಅವರಿಗೆ ಭರವಸೆ ಕೂಡ ಸಿಕ್ಕಿತ್ತು. ಈಗ ಧರ್ಮವೀರ ಕಮಿಟಿ ಎಂದು, ಧರ್ಮವೀರರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ರಚಿಸಿ ಪೊಲೀಸ್ ಇಲಾಖೆಯನ್ನು ಸಂಪೂರ್ಣವಾಗಿ ರಿವ್ಯಾಂಪ್ ಮಾಡಬೇಕು ಮತ್ತು ಅನೇಕ ಪೊಲೀಸ್ ಠಾಣೆಗಳಲ್ಲಿ ಸಿಬ್ಬಂದಿ ವರ್ಗದವರು ಎಂದರೆ ಕಾನ್ಸ್‌ಟೇಬಲ್‌ಗಳು ಬಹಳ ಕಡಿಮೆ ಇದ್ದಾರೆ. ಅನೇಕ ಕಡೆ ಒಂದೊಂದು ಪೊಲೀಸ್ ಠಾಣೆಯಲ್ಲಿ 10, 12 ಜನ ಇರುತ್ತಾರೆ. ಅವರು ಸರದಿ ಪ್ರಕಾರ ಎಂಟು ಗಂಟೆಗೆ ನಾಲ್ಕು ಜನರಂತೆ ಕೆಲಸ ಮಾಡಿದರೆ ಆ 12 ಜನರು ಅನೇಕ ಸಲ ಲಾ ಅಂಡ್ ಆರ್ಡರ್ ಮೇಂಟೇನ್ ಮಾಡುವುದು ಕಷ್ಟವಾಗುತ್ತದೆ. ಅದಕ್ಕಾಗಿ ಪ್ರತಿ ಪೋಲೀಸ್ ಠಾಣೆಗಳಲ್ಲಿ ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ಸಂಖ್ಯೆಯನ್ನು ಜಾಸ್ತಿ ಮಾಡಬೇಕು ಎನ್ನುವುದು ಆ ಧರ್ಮವೀರ ಕಮಿಟಿ ರಿಪೋರ್ಟ್‌ನಲ್ಲಿ ಇತ್ತು. ಅದಕ್ಕೆ ನಾನು ತಮ್ಮ ಮುಖಾಂತರ ಕೇಳುತ್ತೇನೆ ಈ ಧರ್ಮವೀರ ಕಮಿಟಿ ಪ್ರಕಾರ ತಾವು ಏನೇನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ? ಯಾವ್ಯಾವುದನ್ನು ಇಂಪ್ಲಿಮೆಂಟ್ ಮಾಡಿದ್ದೀರಿ? ಇನ್ನು ಯಾವುದು ಇಂಪ್ಲಿಮೆಂಟ್ ಮಾಡತಕ್ಕಂಥಾದ್ದು ಇದೆ ಎಂದು ಹೇಳಬೇಕು. ಹಾಗೂ ಎರಡನೆಯದಾಗಿ ಅವಶ್ಯಕತೆಗೆ ಅನುಗುಣವಾಗಿ ಪೊಲೀಸ್ ಠಾಣೆಗಳನ್ನು ಪ್ರಾರಂಭ ಮಾಡುತ್ತೀರೋ ಹೇಗೆ? ಏಕೆಂದರೆ ಮಾನ್ಯ ಪ್ರಕಾಶ್ ಹುಕ್ಕೇರಿಯವರು ಹೇಳಿದ ಹಾಗೆ ಒಂದು ತಾಲ್ಲೂಕಿನಲ್ಲಿ ಒಂದು ಲಕ್ಷ ಜನಸಂಖ್ಯೆ ಇದ್ದಾಗ್ಯೂ ಒಂದು ಪೊಲೀಸ್ ಸ್ಟೇಷನ್, ಇನ್ನೊಂದು ಕಡೆ 10-15 ಸಾವಿರ ಜನಸಂಖ್ಯೆ ಇದ್ದರೂ ಅಲ್ಲಿ ಒಂದೇ ಪೊಲೀಸ್ ಠಾಣೆ ಇರುತ್ತದೆ. ಆದುದರಿಂದ ಇದನ್ನು ಪ್ರಮೋರ್ಷನೇಟ್ ಆಗಿ ಅವಶ್ಯಕತೆಗೆ ಅನುಗುಣವಾಗಿ ಪ್ರಾರಂಭ ಮಾಡುತ್ತೀರೋ ಹೇಗೆ? ಹಾಗೂ ಕಾನ್ಸ್‌ಟೇಬಲ್ ಸ್ಟೆಂಗ ಜಾಸ್ತಿ ಮಾಡುತ್ತೀರೋ ಹೇಗೆ? ಇನ್ನು ಮೂರನೆಯದಾಗಿ ಡೈರೆಕ್ಟ್ ಸಬ್ ಇನ್ಸ್‌ಪೆಕ್ಟರ್ ರಿಕ್ರೂಟ್‌ಮೆಂಟ್ ಇಲ್ಲ. ಎಲ್ಲರೂ ಕೂಡ ಕಾನ್ಸ್‌ಟೇಬಲ್‌ನಿಂದ ಸಬ್‌ಇನ್ಸ್‌ಪೆಕ್ಟರ್‌ವರೆಗೆ ಬಂದವರೇ ಆಗಿದ್ದಾರೆ. ಇದರಿಂದ ಏನಾಗಿದೆ ಎಂದರೆ ಆಡಳಿತದಲ್ಲಿ ಸ್ವಲ್ಪ ತೊಂದರೆಯಾಗುತ್ತಿದೆ. ಅನೇಕ ಕಡೆ ಡೈರೆಕ್ಟ್ ಸಬ್‌ಇನ್ಸ್‌ಪೆಕ್ಟರ್

ರಿಕ್ರೂಟ್‌ಮೆಂಟ್ ಇಲ್ಲದ ಕಾರಣ ಕಾನ್ಸ್‌ಟೇಬಲ್‌ಗಳು ಸಬ್‌ಇನ್ಸ್‌ಪೆಕ್ಟರ್ ಆಗಿ ಬಂದಂತಹವರಿಗೆ ಅಷ್ಟೊಂದು ಮಾರಲ್ ಕರೇಜ್ ಇರುವುದಿಲ್ಲ. ದಯವಿಟ್ಟು, ಈ ಡೈರೆಕ್ಟ್ ರಿಕ್ರೂಟ್‌ಮೆಂಟ್ ಯಾವಾಗ ಮಾಡುತ್ತೀರಿ? ಮತ್ತು ಅದಕ್ಕೆ ಏನಾದರೂ ಸ್ಪೆಷಲ್ ಡ್ರೈವ್ ತೆಗೆದುಕೊಂಡು ಇದನ್ನು ಮಾಡುತ್ತೀರಾ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ, ಸಿಬ್ಬಂದಿ ವರ್ಗದವರ ಕೊರತೆ ಬಗ್ಗೆ ಮಾನ್ಯ ಖಿರ್ಗಿಯವರು ಪ್ರಸ್ತಾಪ ಮಾಡಿದ್ದಾರೆ. ಅದರ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಸುಮಾರು 4-5 ಸಾವಿರ ಜನ ಕಾನ್ಸ್‌ಟೇಬಲ್‌ಗಳನ್ನು, ಮಹಿಳಾ ಕಾನ್ಸ್‌ಟೇಬಲ್‌ಗಳನ್ನು ನೇಮಕ ಮಾಡಿಕೊಳ್ಳುವುದಕ್ಕೆ ಈ ವರ್ಷ ಅರ್ಥ ಸಚಿವರು, ಹಾಗೂ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಗೆ ಕೊಟ್ಟಿದ್ದಾರೆ. ಧರ್ಮವೀರ ಸಮಿತಿ ಬಗ್ಗೆ ಹೇಳುವುದಾದರೆ, ಅದರ ಬಗ್ಗೆ ತಾವು ಪ್ರತ್ಯೇಕವಾಗಿ ಪ್ರಶ್ನೆಯನ್ನು ಹಾಕಬೇಕಾಗುತ್ತದೆ. ಆ ವಿಷಯದ ಬಗ್ಗೆ ಈ ಸದನದಲ್ಲಿ ಚರ್ಚೆಯಾಗಲಿ. ಅದರಲ್ಲಿ ಯಾವುದನ್ನು ಮಾಡಬಹುದು, ಯಾವುದನ್ನು ಮಾಡುವುದಕ್ಕೆ ಹಣ ಬೇಕಾಗುತ್ತದೆ, ನಮ್ಮ ರಾಜ್ಯದ ಪರಿಸ್ಥಿತಿಯಲ್ಲಿ ಏನೇನು ಅಳವಡಿಸಿಕೊಳ್ಳಬಹುದು ಎಂದು ಒಂದು ಪ್ರತ್ಯೇಕವಾದ ಪ್ರಶ್ನೆಗೆ ನಾನು ಉತ್ತರ ಕೊಡುತ್ತೇನೆ. ಹಾಗು ಪೊಲೀಸ್ ಠಾಣೆಗಳನ್ನು ಪ್ರಾರಂಭ ಮಾಡತಕ್ಕಂಥ ಸಂದರ್ಭದಲ್ಲಿ ಅವಶ್ಯಕತೆಗೆ ಅನುಗುಣವಾಗಿ ಎಂದರೆ ಎಲ್ಲಿ ಮರ್ಡರ್ಸ್, ಕ್ರೈಮ್ಸ್, ಅತ್ಯಾಚಾರಗಳು ಅಥವಾ ದುರ್ಬಲ ವರ್ಗದವರ ಮೇಲೆ ಅನ್ಯಾಯಗಳು ಹಾಗೂ ಸೆನ್ಸಿಟೀವ್ ಏರಿಯಾ ಎಲ್ಲಿ ಇವೆ, ಅದರ ಆಧಾರದ ಮೇಲೆ ನಾವು ಪೊಲೀಸ್ ಠಾಣೆಗಳನ್ನು ಮಂಜೂರಾತಿ ಮಾಡುತ್ತೇವೆ ವಿನಹ ಬೇರೆ ಯಾವ ಆಧಾರದ ಮೇಲೂ ಸಹ ಪೊಲೀಸ್ ಠಾಣೆಯನ್ನು ಮಂಜೂರು ಮಾಡುವುದಕ್ಕೆ ಹೋಗುವುದಿಲ್ಲ. ತಮಗೆ ಗೊತ್ತಿದೆ ಕೆಲವು ತಾಲ್ಲೂಕುಗಳಲ್ಲಿ ಹಲವಾರು ವರ್ಷಗಳಿಂದ ಬಹಳ ಮರ್ಡರ್ ಆಗುತ್ತಿವೆ. ಅಂತಹ ಕಡೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಇನ್ನು ಪಿ.ಎಸ್.ಐ. ರಿಕ್ರೂರ್ಟ್‌ಮೆಂಟ್ ಬಗ್ಗೆ ಹೇಳಿದ್ದಾರೆ ಈಗ ನಿಜವಾಗಿಯೂ ಡೈರೆಕ್ಟ್ ರಿಕ್ರೂಟ್‌ಮೆಂಟ್ ಇಲ್ಲದೆ ಇರುವುದರಿಂದ ಡಿಪಾರ್ಟ್‌ಮೆಂಟ್‌ನಲ್ಲಿ ಬಹಳ ತೊಂದರೆ ಇದೆ. ಸುಮಾರು 400-500 ಜನರ ಡೈರೆಕ್ಟ್ ರಿಕ್ರೂಟೀಸ್ ಪಿ.ಎಸ್.ಐ ರಿಕ್ರೂಟ್‌ಮೆಂಟ್ ಹಲವಾರು ವರ್ಷಗಳಿಂದ ಆಗಿಲ್ಲ. ನೀವು ಗೃಹಮಂತ್ರಿಗಳಾಗಿದ್ದಾಗ ಒಂದು ಸಾರಿ 135 ಜನರನ್ನು ರಿಕ್ರೂಟ್ ಮಾಡಿದ್ದೀರಿ. ಇದಾದ ಮೇಲೆ ಸುಪ್ರೀಂ ಕೋರ್ಟ್‌ನಲ್ಲಿ ಆರ್ಡರ್ ಆಗಿದೆ. ಆ ಆರ್ಡರ್ ಪ್ರಕಾರವಾಗಿ ಅದೇ ಲಿಸ್ಟ್‌ನಿಂದ ಇನ್ನು 40-50 ಜನರನ್ನು ಸೆಲೆಕ್ಟ್ ಮಾಡಬೇಕಾಗಿದೆ. ರೋಸ್ಟರ್ ಸಿಸ್ಟಂ ಪ್ರಕಾರವಾಗಿ ಸುಪ್ರೀಂಕೋರ್ಟ್‌ನ ಆರ್ಡರ್ ಹಿನ್ನೆಲೆಯಲ್ಲಿ ಒಂದೆರಡು ತಿಂಗಳಲ್ಲಿ ಅದೇ ಲಿಸ್ಟ್‌ನಲ್ಲಿ ಇನ್ನು 40 ಜನರಿಗೆ ರಿಕ್ರೂಟ್ ಮಾಡುತ್ತಿದ್ದೇವೆ. ಆದಲ್ಲದೆ ಈ ವರ್ಷ ಸುಮಾರು 150 ರಿಂದ 200 ಜನ ಪಿ.ಎಸ್.ಐ.ಗಳನ್ನು, 20 ಮಹಿಳಾ ಪಿ.ಎಸ್.ಐ.ಗಳನ್ನು ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡುತ್ತಿದ್ದೇವೆ.

1995-96ನೇ ಅವಧಿಯಲ್ಲಿ ಬಿಡಿಎ ಮೂಲಕ ಹಂಚಿಕೆ ಮಾಡಲು ಉದ್ದೇಶಿಸಿರುವ ನಿವೇಶನಗಳು

411 - ಶ್ರೀ ಜೆ.ಎ. ಫರ್ನಾಂಡಿಸ್ (ನಾಮ ನಿರ್ದೇಶನ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿವಿಧ ಅಳತೆಯ ವಸತಿ ನಿವೇಶನ ಹಂಚಿಕೆಗಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ಬಾಕಿ ಇರುವ ಅರ್ಜಿಗಳ ಸಂಖ್ಯೆ ಎಷ್ಟು?

ಆ) 1995-96ನೇ ಸಾಲಿನಲ್ಲಿ ಹಂಚಿಕೆ ಮಾಡಲು ಉದ್ದೇಶಿಸಿರುವ ನಿವೇಶನಗಳ ನಿವೇಶನಗಳ ಸಂಖ್ಯೆ ಎಷ್ಟು?